

# ಬಸವಗೀತೆ

ಸತ್ಯ ಸಂವಾದ -194

- ಬಸವರಾಜ ಸ್ವಾಮಿ
9980553750

ಕತ್ತಲು ಬೆಳಕಿಗೆ ಆಹಾರವಾಗುವುದನ್ನು ಶರಣರು ಗಮನಿಸುತ್ತಿದ್ದಾರೆ ಲಗುಬಗೆಯಿಂದ ಸತ್ಸಂಗಕ್ಕೆಂದು ಮಹಾಮನೆಗೆ ಹೋಗುತ್ತಿದ್ದಾರೆ. ವೇದಿಕೆ ಮೇಲೆ ಕುಳಿತ ಬಸವಣ್ಣನವರಿಗೆ ಹಣೆ ಮಣಿದು ಶರಣು ಶರಣಾರ್ಥಿ ಎಂದು ಹೇಳುತ್ತಾ ಕುಳಿತುಕೊಳ್ಳುತ್ತಾರೆ.

**ಗುರುಭಕ್ತಯ್ಯ :**

ಉಡುವಿನ ಭಾವದಲ್ಲಿ ಹಡೆದರೆಮ್ಮವರು
ಊಸರವಳ್ಳಿಯಂತೆ ಎನ್ನ ಇರವು,
ಬಾವುಲ ಬಾಳುವೆಯ ತೆರನಂತೆ !
ಹೊತ್ತಾರೆ ಎದ್ದ ಕುರುಡಂಗೆ
ಅಗುಸೆಯಲ್ಲಿ ಅಸ್ತಮಾನವಾದಂತೆ-
ಆನು ಭಕ್ತಿಯ ಬಯಸಿದಡಹುದೆ
ಕೂಡಲಸಂಗಮದೇವಾ ? ॥ 292 ॥

ತಾವು ದಾಖಲಿಸಿದ ಈ ವಚನದ ಬೆಡಗನ್ನು ತಮ್ಮ ಶರಣರಿಗೆ ಬಿಡಿಸಿ ಹೇಳಿ ಬಸವರಸ.

**ಬಸವಣ್ಣ :** ತನುವಿನಲ್ಲಿ ಅರಿವಿನ ಬ್ರಹ್ಮಾಂಡವೇ ಅಡಗಿದೆ. ಮನದಿಂದಾಗಿ ತನುವಿಗೆ ಅರಿವಿನ ದರ್ಶನವಾಗುತ್ತಿಲ್ಲ. ಇದಕ್ಕೆ ಹಡೆದ ತಂದೆ ತಾಯಿಗಳೂ ಕಾರಣ ರಾಗಿದ್ದಾರೆ.

ತಂದೆ ತಾಯಿಗಳಿಗೆ ಮನ ನಷ್ಟವಾಗಿ ಅರಿವಿನ ದರ್ಶನವಾಗಿದ್ದರೆ ಅರಿವಿನ ಮತ್ತೊಂದು ತನುವಿನ ಬಯಕೆಗಾಗಿ ಕೂಡುತ್ತಿದ್ದರು. ಸತಿ ಪತಿಗಳ ಕೂಟ ಮತ್ತೊಂದು ಅರಿವಿನ ಕುಡಿಗೆ ಕಾರಣವಾಗಿ ಗರ್ಭದಲ್ಲಿ ಬೆಳೆಯುತ್ತಿತ್ತು . ಬುದ್ಧ, ಮಹಾವೀರ, ಅಕ್ಕಮಹಾದೇವಿ, ನೀಲಮ್ಮ, ಬಸವಣ್ಣ, ಕ್ರಿಸ್ತ , ಕ್ರಿಷ್ಣ , ಮೀರಾಳಂತಹ ಜ್ಞಾನಿಗಳಿಗೆ ಜನ್ಮ ನೀಡುತ್ತಿದ್ದರು. ಮಹಾಜ್ಞಾನಿಗಳೆ ನಾಡಿನ ತುಂಬಾ ಬೆಳಗುತ್ತಿದ್ದರು.

ಮತ್ತೊಂದು ಅರಿವಿನ ಜನ್ಮಕ್ಕಾಗಿ ಮಾತ್ರ ಸತಿಪತಿಗಳ ಕೂಟವಿದ್ದರೂ ಮನಕ್ಕೆ ಇದು ತಿಳಿಯುತ್ತಿಲ್ಲ. ತನುವನ್ನು ಮನ ವಿಕೃತ ಕಾಮದ ಸುಖಕ್ಕಾಗಿ ದುರ್ಬಳಕೆ ಮಾಡಿಕೊಳ್ಳುತ್ತದೆ. ಸತಿಯನ್ನು ಕೂಡುತ್ತಾ ಪರಸತಿಯರೊಂದಿಗೆ ಕಾಮ ಕ್ರೀಡೆಯ ಹಾದರದಲ್ಲಿ ತೊಡಗುತ್ತದೆ. ಹೀಗೆ ಹಾದರದೊಂದಿಗೆ ವಿಸರ್ಜನೆಯಾದ ಬಿಂದುವಿನ ಬೀಜದಲ್ಲಿ ಅರಿವೂ ಇದೆ; ಹಾದರದ ಮನವೂ ಬೆರೆತಿದೆ. ಹೀಗೆ ಹಾದರದ ಉಡುವಿನ ಭಾವದಲ್ಲಿ ಹಡೆದ ತನುಗಳಲ್ಲಿ ವಿಕೃತ ಮನವೂ ಇದೆ ಅರಿವೂ ಇದೆ.

ಬೆಳೆದ ತನುವನ್ನು ಆವರಿಸಿದ ಮನ ಊಸರವಳ್ಳಿಯಂತೆ ಕ್ಷಣಕ್ಕೊಮ್ಮೆ ತನುವಿನಲ್ಲಿ ಬಣ್ಣ ಬದಲಿಸುತ್ತದೆ. ಕಳ್ಳ, ಹಾದರಿಗ, ಭ್ರಷ್ಟ, ಸಾತ್ವಿಕ, ತಾಮಸಿಗ, ವಿಟ, ವೇಶ್ಯೆ , ದಾನಿ, ಸ್ವಾಮಿ, ಮುಂತಾದ ವೇಷಗಳನ್ನು ತನುವಿಗೆ ಹಾಕಿ ವ್ಯವಹಾರಕ್ಕೆ ನಿಲ್ಲುತ್ತದೆ.

ತೋಳ್ಬಾವುಲಿಯಂತೆ ಕತ್ತಲ ಲೋಕವೇ ಮನಕ್ಕೆ ಸುಖ ನೀಡಿ ತನುವನ್ನು ದುರ್ಬಳಕೆ ಮಾಡಿಕೊಳ್ಳುತ್ತದೆ.

ಕಾಮದ ಕಣ್ಣು ಜಾಗ್ರತವಾಗಿ ಅರಿವಿನ ಕಣ್ಣು ಕಣ್ಣಿನಲ್ಲಿಯೇ ಉಳಿದು ಹಗಲು ಕುರುಡನಾಗುತ್ತದೆ.

ತಂದೆ ತಾಯಿಗಳಿಂದಾದ ಜನ್ಮದ ದೋಷ ಹುಸಿ ವೇಷ ಧರಿಸಿದರೆ ತೊಲಗುವುದಿಲ್ಲ. ಅದು ಮನದ ಮತ್ತೊಂದು ಕಪಟತನ.

ಹಾದರದಲ್ಲಿ ಸದಾ ಸುಖಿಸುವ ಮನ ಅರಿವಿನ ಸುಖಕ್ಕಾಗಿ ಹಾತೊರೆದರೆ ಕೂಡಲೆ ನಷ್ಟವಾಗುತ್ತದೆ. ಆಗ ಅಂಗ ಅಂಗದಲ್ಲಿರುವ ಅರಿವೆಂಬ ಲಿಂಗ ಅದನ್ನು ಪಾಲಿಸುವ ಜಂಗಮ ಮಾತ್ರ ಉಳಿಯುತ್ತಾನೆ. ಇದೇ ಲಿಂಗಾಂಗ ಸಾಮರಸ್ಯ ! ಬುದ್ಧ ಬಸವ ಕ್ರಿಸ್ತ ಕ್ರಿಷ್ಣರ ಮಹಾಜ್ಞಾನದ ಸಾಮರಸ್ಯ !

**ಎಲೆಗಾರ ಕಾಮಣ್ಣ :** ಏಳು ಸಾಲಿನ ತಮ್ಮ ಈ ವಚನದಲ್ಲಿ ಅದೆಷ್ಟು ಬೆಡಗು ತುಂಬಿರುವಿರಿ ಬಸವರಸ. ನಮಗೆ ಆ ಬೆಡಗನ್ನು ಬಿಡಿಸಿ ಹೇಳಿದ ತಮಗೆ ಶರಣು ಶರಣಾರ್ಥಿ.

**ಬಸವಣ್ಣ :** ಇಂದು ಈ ವಚನವನ್ನು ವಚನದ ತಿರುಳನ್ನು ಸವಿಯುತ್ತಾ ಇಂದಿಗೆ ಸಭೆಗೆ ಮಂಗಳ ಹಾಡೋಣ ನಾಳೆ ಮತ್ತೆ ಸತ್ಸಂಗದಲ್ಲಿ ಸೇರೋಣ ಎಂದು ಹೇಳುತ್ತಾ ಸಕಲ ಶರಣರಿಗೂ ಶರಣು ಶರಣಾರ್ಥಿ ಹೇಳಿದರು.

ಸಕಲ ಶರಣರು ಗುರುಭಕ್ತಯ್ಯನವರ ವಚನದಲ್ಲಿ ಬಚ್ಚಿಟ್ಟುಕೊಂಡ ಬೆಡಗಿನ ಸವಿಯನ್ನು ಸವಿಯುತ್ತಾ ತಮ್ಮ ತಮ್ಮಲ್ಲಿಯೇ ಚರ್ಚೆ ಮಾಡುತ್ತಾ ಮನೆಗೆ ನಡೆದರು.

### 4 ಸರ್ಕಾರಿ ಘಟಕಗಳು ಬಂದ್, ಪ.ಪಂ ಅಧಿಕಾರಿಗಳಿಂದ ಅಕ್ರಮಕ್ಕೆ ಕುಮ್ಮಕ್ಕು ?

# ಸಿರವಾರ : ಅಕ್ರಮ ಶುದ್ಧ ನೀರು ಘಟಕಗಳು ಮಾಲಕರ ಹಗಲು ದರೋಡೆ

• **ಸುರೇಶ ಹೀರಾ** ಸಿರವಾರ, ಮೇ.26:

**ಅಕ್ರಮ ದಂಧೆ, ಭ್ರಷ್ಟಾಚಾರ ಎಲ್ಲಾ ಕಡೆ ನಡೆಯುವುದು ಹೊಸದೇನು ಅಲ್ಲಾ, ಆದರೆ ಜೀವ ಜಲ ಕುಡಿಯುವ ನೀರಿನ ಸರಬರಾಜಿನಲ್ಲೂ ಸಹ ಅಕ್ರಮ ದಂಧೆ ನಡೆಯುತ್ತಿದೆ.**



ಪಟ್ಟಣದಲ್ಲಿ ಅಕ್ರಮವಾಗಿ ಶುದ್ಧ ಕುಡಿಯುವ ನೀರಿನ ಘಟಕಗಳು ಹೆಚ್ಚಾಗಿವೆ ಹಾಗೂ ಪಕ್ಕದ ಹಳ್ಳಿಯಲ್ಲಿನ ನೀರಿನ ಘಟಕಗಳಿಂದ ನೀರು ತಂದು ಪಟ್ಟಣದಲ್ಲಿ ಮಾರಾಟ ಮೂಲಕ ಹಣಗಳಿಕೆಗೆ ಮುಂದಾಗಿದ್ದಾರೆ.

ಅಕ್ರಮವಾಗಿ ನೀರು ಮಾರಾಟ ಮಾಡುವ ನೀರು ಕುಡಿಯಲು ಯೋಗ್ಯವಾಗಿದೆಯೋ, ಇಲ್ಲವೋ ಎಂದು ಪರೀಕ್ಷೆ ಮಾಡಬೇಕು, ಅದು ಯಾವುದು ಇಲ್ಲಿ ಆಗುತ್ತಿಲ್ಲ.

ಇದರಿಂದ ಪಟ್ಟಣ ಪಂಚಾಯತ ಅಧಿಕಾರಿಗಳು ಅಕ್ರಮ ಶುದ್ದೀಕರಣ ಘಟಕಗಳ ಜೊತೆ ಶಾಮೀಲಾಗಿದ್ದಾರೆ ಎಂದು ಸಂಘಟನೆಯ ಪದಾಧಿಕಾರಿಗಳ ಆರೋಪವಾಗಿದೆ.

ಪಟ್ಟಣದಲ್ಲಿ ಸುಮಾರು 5 ಖಾಸಗಿ ಘಟಕಗಳು ಇದ್ದು ಇವುಗಳಿಗೆ ಯಾವುದೇ ಪರವಾನಗಿ ಇಲ್ಲಾ, ಪಟ್ಟಣ ಪಂಚಾಯತಿಯಲ್ಲಿ ಯಾವುದೇ ನೋಂದಣಿ ಇಲ್ಲಾ, ಇನ್ನೂ ಸರಕಾರದಿಂದ ತಲಾ 10 ಲ. ರೂ. ವೆಚ್ಚದಲ್ಲಿ ನಿರ್ಮಿಸಲಾದ 4 ಘಟಕಗಳು ಇದ್ದು ಅವುಗಳು ಪಟ್ಟಣ ಪಂಚಾಯತ ವಶಕ್ಕೆ ತೆಗೆದುಕೊಂಡಿಲ್ಲಾ ಏಜೆನ್ಸಿ ಮೂಲಕ ನಡೆಯುತ್ತಿವೆ.

ಅವುಗಳಿಗೆ ನೀರು ಸರಬರಾಜು ಮಾಡಬೇಕಾದ ಪ.ಪಂ. ನೀರಿನ ಕಡಿತ ಮಾಡಿದ್ದು, ಕಳೆದ 15ದಿನಗಳಿಂದ ಬಂದ್ ಮಾಡಲಾಗಿದೆ. ಪಟ್ಟಣದ ಸಾರ್ವಜನಿಕರು ಖಾಸಗಿ ಘಟಕಗಳ ಮುಂದೆ ನಿಲ್ಲಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಸ್ಥಳೀಯ ಪ.ಪಂ, ತಾಲ್ಲೂಕು ಆಡಳಿತ ಸಾರ್ವಜನಿಕರಿಗೆ ನೀರು, ಬೆಳಕು, ರಸ್ತೆ, ಬೀದಿ ದೀಪ, ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ಪ.ಪಂ. ಆಡಳಿತ ವಿಫಲವಾಗಿದೆ.

ಕಳೆದ ಎರಡು ವರ್ಷಗಳಿಂದ ಪ.ಪಂ. ಅಧ್ಯಕ್ಷ - ಉಪಾಧ್ಯಕ್ಷರ ನೇಮಕ ಇಲ್ಲಾ, ಅಧಿಕಾರಿಗಳ ಆಡಳಿತ ಅಧಿಕಾರಿಗಳು ಖಾಯಂ ಇಲ್ಲಾ, ಪ್ರಭಾರಿ, ವರ್ಗಾವಣೆ, ಚುನಾವಣೆ ನೆಪ ಹಲವಾರು ಕಾರಣದಿಂದ ಪಟ್ಟಣದಲ್ಲಿ ಅಭಿವೃದ್ಧಿ ಯೋಜನೆ, ಕಾರ್ಯಗಳು ಮಾಯವಾಗಿವೆ. ಇನ್ನಾದರು ಇದಕ್ಕೆ ಸಂಬಂಧಿಸಿದ ಜಿಲ್ಲಾಧಿಕಾರಿಗಳು, ಜನಪ್ರತಿನಿಧಿಗಳು ಗಮನಹರಿಸಿ ಸರ್ಕಾರದ ಯೋಜನೆಯ ಲಾಭ ಸಾರ್ವಜನಿಕರಿಗೆ ಸಕಾಲದಲ್ಲಿ ಸದುಪಯೋಗ ಪಡಿಸಿಕೊಳ್ಳಲು ಅನುಕೂಲ ಮಾಡಿಕೊಡಲು ಮುಂದಾಗಬೇಕಾಗಿದೆ.

> ಪಟ್ಟಣದಲ್ಲಿ ಕೊಳವೆ ಬಾವಿ ಅಂತರ್ ಜಲ ಕುಸಿತವಾಗಿದೆ, ನೀರಿನ ಸಮಸ್ಯೆ ಇದೆ, ಆದ್ದರಿಂದ ಶುದ್ಧ ಘಟಕಗಳನ್ನು ಬಂದ್ ಮಾಡಲಾಗಿದೆ
>
> **-ಲಕ್ಷ್ಮೀ**
> **ಪ.ಪಂ. ನೀರು ಸರಬರಾಜು ಅಧಿಕಾರಿ.**

> ಅನೇಕ ವರ್ಷಗಳ ಕಾಲದಿಂದ ಶುದ್ದೀಕರಣ ಘಟಕ ಆರಂಭವಾಗಿದೆ. ಪ.ಪಂ. ಅಧಿಕಾರಿಗಳು ನೀರು ಬಂದ್ ಮಾಡಿದ್ದಾರೆ.
>
> **-ಲಕ್ಷ್ಮಣ**
> **ಶುದ್ದೀಕರಣದ ಕೆಲಸಗಾರ.**

### ಮಕ್ಕಳ ಬೇಸಿಗೆ ಶಿಬಿರ ಸಮಾರೋಪ, ವಿವಿಧ ಕಲೆ ಪ್ರದರ್ಶನ

# ಆಸಕ್ತಿ , ಕ್ರಿಯಾಶೀಲತೆಗೆ ಶಿಬಿರಗಳಿಂದ ಪ್ರೋತ್ಸಾಹ - ಅರುಣಾಬಾಯಿ

• **ಸುದ್ದಿಮೂಲ ವಾರ್ತೆ** ರಾಯಚೂರು, ಮೇ.26:

ಮಕ್ಕಳಲ್ಲಿರುವ ವಿಭಿನ್ನವಾದ ಆಸಕ್ತಿ ಮತ್ತು ಕ್ರಿಯಾಶೀಲತೆಗೆ ಇಂತಹ ಮಕ್ಕಳ ಬೇಸಿಗೆ ಶಿಬಿರ ಉತ್ತಮ ವೇದಿಕೆಯಾಗಲಿವೆ ಎಂದು ಶಿಕ್ಷಕಿ ಅರುಣಾಬಾಯಿ ಹೇಳಿದರು.

ಪಂಡಿತ ತಾರಾನಾಥ ಸಾಂಸ್ಕೃತಿಕ ವೇದಿಕೆ, ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟೂಡೆಂಟ್ ಆರ್ಗನೈಸೇಶನ್ ಸಹಯೋಗದಲ್ಲಿ ತಾಲೂಕ ಆರೋಗ್ಯಾಧಿಕಾರಿಗಳ ಭದ್ರಾ ಸಭಾಂಗಣದಲ್ಲಿ ಹಮ್ಮಿಕೊಂಡ ಮೂರು ದಿನಗಳ ಮಕ್ಕಳ ಬೇಸಿಗೆ ಶಿಬಿರ ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದರು.ಮಕ್ಕಳು ಶಿಬಿರದಲ್ಲಿ ಅತ್ಯಂತ ಕ್ರಿಯಾಶೀಲರಾಗಿ ಭಾಗವಸಿದ್ದಾರೆ. ಅವರಲ್ಲಿ ಭಿನ್ನವಾದ ಆಸಕ್ತಿ ಪ್ರತಿಭೆಗಳಿದ್ದು, ಅದನ್ನು ಗುರುತಿಸಿ ಪ್ರೋತ್ಸಾಹಿಸಿ ಬೆಂಬಲಿಸಬೇಕು ಎಂದರು.

ಶಿಕ್ಷಕ ಮುರಳಿಧರ ರೆಡ್ಡಿ ಮಾತನಾಡಿ, ಮಕ್ಕಳ ಮನಸು ಬಿಳಿ ಕಾಗದದಂತೆ ನಾವು ಈಗ ಏನು ಹೇಳುತ್ತೇವೆಯೊ ಅದು ಅವರಲ್ಲಿ ಉಳಿಯುತ್ತದೆ. ಮಕ್ಕಳಲ್ಲಿ ಉತ್ತಮ ವಿಚಾರ, ಆದರ್ಶ, ಆಸಕ್ತಿಗಳನ್ನು ಬೆಳೆಸಬೇಕು ಎಂದರು. ಹಾಗಾದಾಗ ಮಾತ್ರ ಅವರಲ್ಲಿ ಉತ್ತಮ ವ್ಯಕ್ತಿತ್ವ ಬೆಳೆಯಲು ಸಾಧ್ಯವೆಂದು ಅಭಿಪ್ರಾಯಪಟ್ಟರು.

ಪಂಡಿತ್ ತಾರಾನಾಥ ಸಾಂಸ್ಕೃತಿಕ ವೇದಿಕೆಯ ಕಾರ್ಯದರ್ಶಿ ಸರೋಜಾ ಗೋನವಾರ ಮಾತನಾಡಿ, ಮೂರು ದಿನಗಳ ಕಾಲ 70ಕ್ಕೂ ಹೆಚ್ಚು ಮಕ್ಕಳು ಅತ್ಯಂತ ಕ್ರಿಯಾಶೀಲರಾಗಿ ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ. ತಮ್ಮ ಮಕ್ಕಳನ್ನು ಶಿಬಿರಕ್ಕೆ ಕಳಿಸಿದ ಪಾಲಕರ ಸಹಕಾರವನ್ನು ಸ್ಮರಿಸಿದರು.




ಕಾರ್ಯಕ್ರಮದಲ್ಲಿ ಮಕ್ಕಳು ಮೂರು ದಿನಗಳ ಕಾಲ ಕಲಿತ ಹಾಡು, ಚಿತ್ರಕಲೆ, ಕಥೆ ಹೇಳುವುದು, ಜಾನಪದನೃತ್ಯ, ಕ್ರಾಫ್ಟ್ಸ ತಮ್ಮ ಪಾಲಕರ ಮುಂದೆ ಪ್ರದರ್ಶಿಸಿದರು.

ಅಧ್ಯಕ್ಷತೆ ವಹಿಸಿದ್ದ ಎಐಡಿಎಸ್‌ಓ ಜಿಲ್ಲಾಧ್ಯಕ್ಷ ಹಯ್ಯಾಳಪ್ಪ ವಹಿಸಿದ್ದರು. ಎಐಡಿವೈಓ ಜಿಲ್ಲಾಧ್ಯಕ್ಷ ಚನ್ನಬಸವ ಜಾನೇಕಲ್, ಇನ್ಫೆಂಟ್ ಜೀಸಸ್ ಶಾಲೆಯ ಶಿಕ್ಷಕಿ ಗಾಯತ್ರಿ , ಡ್ಯಾನ್ಸ್ ಮಾಸ್ಟರ್ ಶ್ರೀನಿವಾಸ್, ಚಿತ್ರ ಕಲಾವಿದ ಗೋವಿಂದ ಆಶ್ರಿತ ರೋಗಗಳ ನಿಯಂತ್ರಣ ಮೇಲ್ವಿಚಾರಕಿ ಸಂಧ್ಯಾ, ಎಐಡಿಎಸ್‌ಓನ ಅಮೋಘ, ವೀರೇಶ್, ಹೇಮಂತ್, ಅಣ್ಣಪ್ಪ, ಮೌನೇಶ್ ಮತ್ತು ಪಾಲಕರಿದ್ದರು.

# ಪರಿಷತ್ ಚುನಾವಣೆ : ಜಗನ್ನಾಥ ಸುಂಕಾರಿಗೆ ಅವಕಾಶ ನೀಡಲು ಒತ್ತಾಯ

• **ಸುದ್ದಿಮೂಲ ವಾರ್ತೆ** ರಾಯಚೂರು, ಮೇ.26:

ಛಲವಾದಿ ಸಮಾಜದ ಹಿರಿಯ, ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯ ಸಂಚಾಲಕರಾಗಿರುವ ಜಗನ್ನಾಥ ಸುಂಕಾರಿ ಅವರ ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ನಾಮನಿರ್ದೇಶನ ಮಾಡುವಂತೆ ದಲಿತ ಸಂಘಟನೆಗಳ ವೇದಿಕೆ ಮುಖಂಡ ರವೀಂದ್ರನಾಥ ಪಟ್ಟಿ ಒತ್ತಾಯಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹಲವಾರು ವರ್ಷಗಳಿಂದ ಕಾಂಗ್ರೆಸ್ ಪಕ್ಷಕ್ಕೆ ನಿಷ್ಠೆಯಿಂದ ನೀಡಿದ ಜವಾಬ್ದಾರಿ ನಿಭಾಯಿಸಿ ಪಕ್ಷ ಸಂಘಟನೆ ಮಾಡಿದ್ದಾರೆ ಎಂದರು.

ಗುವಿವಿ ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾಗಿ, ಕೆಕೆಆರ್‌ಡಿಸಿ ನಿಗಮ ಮಂಡಳಿ ಸದಸ್ಯರಾಗಿ, ಬೀಜ ನಿಗಮದ ನಿರ್ದೇಶಕರಾಗಿ, ಕ್ರೀಡಾ ಪ್ರಾಧಿಕಾರದಲ್ಲಿ ಸೇವೆ ಸಲ್ಲಿಸಿ ಅಪಾರ ಅನುಭವ ಹೊಂದಿದ್ದಾರೆ. ದೇವದುರ್ಗ, ಲಿಂಗಸೂಗೂರು ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದರೂ, ಭೋವಿ ಸಮಾಜಕ್ಕೆ ಅವಕಾಶ ಕೊಟ್ಟು ಹಲವು ವರ್ಷದಿಂದ ಈ ಭಾಗದ ಛಲವಾದಿ ಸಮಾಜದ ಮುಖಂಡರಿಗೆ ಪ್ರಾತಿನಿಧ್ಯ ಸಿಕ್ಕಿಲ್ಲ. ಹೀಗಾಗಿ, ಜೂನ್ ತಿಂಗಳಲ್ಲಿ ವಿಧಾನಸಭೆಯಿಂದ ವಿಧಾನಪರಿಷತ್‌ಗೆ ನಡೆಯುವ ಶಾಸಕರ ಆಯ್ಕೆಯ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಜಗನ್ನಾಥ ಸುಂಕಾರಿ ಅವರಿಗೆ ಅವಕಾಶ ಒದಗಿಸಿಕೊಡಲು ಪಕ್ಷದ ಹೈಕಮಾಂಡ್‌ಗೂ ಮನವಿ ಮಾಡಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಆರ್.ರವಿಕುಮಾರ, ಆರ್.ತಿಮ್ಮಾರೆಡ್ಡಿ, ಶ್ರೀನಿವಾಸ ಮಾಚರ್ಲಾ, ಆಂಜಿನೇಯ್ಯ , ನರಸಿಂಹಲು, ಬಸವರಾಜ, ತಿಮ್ಮಗುರು ಇದ್ದರು.


**ಸುದ್ದಿಮೂಲ ಜಾಹೀರಾತಿಗಾಗಿ ಸಂಪರ್ಕಿಸಿ : 9591149001**



## PUBLIC NOTICE

Be it known to all, that I, Shabbir Ahmed, Advocate as per the instructions and information given to me by my client Sri. Pampapathi. G S/o Late S. Gangappa, R/o Jyoti colony, Raichur, that agricutlure land bearing Sy.No.11/1 measuring 01 acre 05 guntas situated at Hosur village of Raichur District is owned by his father Late S.Ganappa, who expired during 1994 leaving his legal heirs his wife three sons and two daughters i.e. (1) Smt. Bassamma wife (2) G. Vinayaka son (3) Vijaylaxmi daughter (4) Vishwanath son (5) Vaishali daughter and (6) Pampapathi.G. son.

It is further informed by my client that after his father death his elder brother Late G.Vinayaka in the year 1996-97 without the knowledge and consent of him and other family members have and without giving their share, illegally behind their back mutated the said land into his name by forging the signatures of the other legal heirs and converted it into N.A.Land and made 27 plots. Further his brother's wife Smt. Arathi and sister Smt. Vaishali W/o Chandru are hand with glove are selling the said plots which is totally illegal.

Therefore, it is informed to general public not to transact, purchase any of the plots in the Sy.No.11/1 of Hosur village of Raichur, from Smt. Arathi W/o Late G.Vinayaka and Smt. Vaishali W/o Chandru, since the matter is being challenged in the court of law. Even after this, any one is transacting from the above persons, they are doing it on their own risk and consequences may be noted.

**Place : Raichur.**
**Date : 26-05-2024.**

**Sd/- (Shabbir Ahmed)**
**Advocate.**
**Reg.No.873/13,**
**Galibnagar Raichur**


# ಬ್ಯಾಂಕ್ ಹಣ ಎಗರಿಸುವ ಸೈಬರ್ ವಂಚಕರು

# ಅನಗತ್ಯ ಆ್ಯಪ್ ಸಂದೇಶ ಕ್ಲಿಕ್, ಕರೆ ಸ್ವೀಕರಿಸಬೇಡಿ - ಎಸ್‌ಪಿ

• **ಸುದ್ದಿಮೂಲ ವಾರ್ತೆ** ರಾಯಚೂರು, ಮೇ.26:



ಕೋವಿಡ್ ಲಸಿಕೆ ಹಾಕಿಕೊಂಡಿದ್ದೀರಾ ಎಂದು ವಿಚಾರಿ ಸುವ, ಆ್ಯಪ್ ಲಿಂಕ್ ಕಳುಹಿಸುವ ಸೈಬರ್ ವಂಚಕರಿಂದ ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕು ಅವರು ಕೇಳುವ ಯಾವುದೆ ಮಾಹಿತಿ ನೀಡಬಾರದು ಎಂದು ಜಿಲ್ಲಾ ಪೊಲೀಸ್ ವರಿಷ್ಟಾಧಿಕಾರಿ ಬಿ.ನಿಖಿಲ್ ತಿಳಿಸಿದ್ದಾರೆ.

ಬ್ಯಾಂಕಿನ ಹೆಸರಲ್ಲಿ ಮೊಬೈಲ್‌ಗೆ ಸಂದೇಶ ಕಳುಹಿಸುವ ಜಾಲ ವ್ಯಾಪಕವಾಗಿ ಹಬ್ಬಿ ವಂಚನೆ ಮಾಡುವ ಬಗ್ಗೆ ದೂರುಗಳು ಬಂದಿವೆ. ಅಲ್ಲದೆ, ಅನಗತ್ಯವಾಗಿರುವ ಆ್ಯಪ್‌ಗಳ ಸಿದ್ದಪಡಿಸಿ ವಾಟ್ಸಾಪ್, ಬ್ಯಾಂಕ್ ಖಾತೆಗೆಳಿಗೆ ಲಿಂಕ್ ಆಗಿರುವ ಮೊಬೈಲ್ ಸಂಖ್ಯೆಗೆ ಸಂದೇಶ ಕಳುಹಿಸಲಾಗುತ್ತಿದೆ. ಅದನ್ನು ಒತ್ತಿದ ತಕ್ಷಣ ಲಿಂಕ್ ತೆರೆದುಕೊಂಡು ಆ ವ್ಯಕ್ತಿಯ ಎಲ್ಲ ಮಾಹಿತಿ ಯಾವುದೇ ಓಟಿಪಿ ಇಲ್ಲದೆ ಬ್ಯಾಂಕ್ ಖಾತೆಯಲ್ಲಿನ ಎಲ್ಲ ಹಣ ದೋಚುವ ಸಾಧ್ಯತೆ ಇದ್ದು ಎಚ್ಚರಿಕೆ ವಹಿಸಬೇಕು ಎಂದು ಮನವಿ ಮಾಡಿದ್ದಾರೆ.

ಅಲ್ಲದೆ, ಕರೆ ಮಾಡಿ ಕರೋನಾ ಲಸಿಕೆ ಪಡೆದಿದ್ದೀರಾ ಹೌದು ಎಂದಾದರೆ 1, ಇಲ್ಲ ಎಂದಾದರೆ 2 ಒತ್ತಿ ಎನ್ನುವ ಆಯ್ಕೆ ನೀಡುತ್ತಿದ್ದು ಇದರಲ್ಲಿ ಯಾವ ಸಂಖ್ಯೆ ಒತ್ತಿದರೂ ನಿಮ್ಮ ಮೊಬೈಲ್ ಬಂದ್ ಆಗಿ ಆರಂಭಿಸುವ ಹೊತ್ತಿಗೆ ನಿಮ್ಮ ಹೆಸರಲ್ಲಿ ಎಲ್ಲ ಬ್ಯಾಂಕ್‌ನಲ್ಲಿರುವ ಖಾತೆಯ ಹಣ ವರ್ಗಾವಣೆಯಾಗಿರುತ್ತದೆ.

ಹೀಗಾಗಿ, ಬ್ಯಾಂಕ್ ಖಾತೆಗೆ ಲಿಂಕ್ ಆಗಿರುವ ಮೊಬೈಲ್ ಸಂಖ್ಯೆಗೆ ವಾಟ್ಸಾಪ್, ಸಂದೇಶ, ಆ್ಯಪ್‌ಗಳು ಬಂದರೂ ಆ ಲಿಂಕ್ ಒತ್ತದಂತೆ ಎಚ್ಚರಿಕೆ ನೀಡಿದ್ದಾರೆ.

ಒಂದೊಮ್ಮೆ ಸಂದೇಶ, ಲಿಂಕ್ ಒತ್ತಿದರೆ ನಿಮ್ಮ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಬ್ಯಾಂಕ್‌ಗಳ ಸಂಪರ್ಕಿಸಿ ಖಾತೆ ವ್ಯವಹಾರ ಸ್ಥಗಿತಕ್ಕೆ ಕೋರುವುದು ಅಥವಾ ಅನಾಮಿಕ ಕರೆ ಬಂದರೆ ತಿರಸ್ಕರಿಸುವುದು, ಹಣ ವರ್ಗಾವಣೆಯಾಗಿದ್ದರೆ ಸಹಾಯವಾಣಿ 1930ಗೆ ಕರೆ ಮಾಡಿ ದೂರು ದಾಖಲಿಸಲು ಜಿಲ್ಲಾ ಪೊಲೀಸ್ ವರಿಷ್ಟಾಧಿಕಾರಿ ಬಿ.ನಿಖಿಲ್ ಕೋರಿದ್ದಾರೆ.

# ಮಸ್ಕಿಯಲ್ಲಿ ಇಂದಿರಾ ಕ್ಯಾಂಟೀನ್‌ಗೆ ಸಿದ್ಧತೆ

• **ಸುದ್ದಿಮೂಲ ವಾರ್ತೆ** ಮಸ್ಕಿ, ಮೇ.26:

ಪಟ್ಟಣದ ಹಳೆ ಪ್ರವಾಸಿ ಮಂದಿರದಲ್ಲಿ ಸರ್ಕಾರ ಇಂದಿರಾ ಕ್ಯಾಂಟೀನ್ ನಿರ್ಮಾಣ ಮಾಡುತ್ತಿದ್ದು, ರೈತರಿಗೆ ಜನಸಾಮಾನ್ಯರಿಗೆ, ಮಧ್ಯಮ ವರ್ಗದವರಿಗೆ, ಮತ್ತು ಕಾರ್ಮಿಕರಿಗೆ ತುಂಬಾ ಉಪಯುಕ್ತವಾಗಲಿದೆ.

ಬಹುತೇಕ ಶಾಲಾ ಕಾಲೇಜುಗಳು ಮತ್ತು ಸರ್ಕಾರಿ ಕಚೇರಿಗಳು ಇವೆ. ಹೊಸಬಸ್ ನಿಲ್ದಾಣ ಪಕ್ಕದಲ್ಲಿರುವ ಇಂದಿರಾ ಕ್ಯಾಂಟೀನ್ ಅತಿ ಶೀಘ್ರದಲ್ಲೇ ಸಾರ್ವಜನಿಕರಿಗೆ ವಿವಿಧ ಉಪಾಹಾರ ಮತ್ತು ಊಟ ದೊರೆಯಲಿದೆ.

ಈಗಾಗಲೇ ಮೇಲ್ಚಾವಣಿ ಹಾಗೂ ಗೋಡೆಗಳ ಕೆಲಸ ಮುಗಿದಿದ್ದು, ಇಂದಿರಾ ಕ್ಯಾಂಟೀನ್ ನ ಏಕವಾಗಿ ಪೂರ್ಣ ಘಟಕ ಬೆಂಗಳೂರಿನಿಂದ ತಂದು ಸ್ಥಾಪಿಸಲಾಗುತ್ತಿದೆ ಇನ್ನು ಕೆಲವೇ ದಿನಗಳಲ್ಲಿ ಕ್ಯಾಂಟೀನ್ ಕಾರ್ಯ ಮುಗಿಸುತ್ತೇವೆ ಎಂದು ಘಟಕದ ಇಂಜಿನಿಯರ್ ಹೇಳಿದರು.

ಈ ಕುರಿತು ಆಟೋ ಚಾಲಕರ ಸಂಘದ ಅಧ್ಯಕ್ಷ ಸಿದ್ದು ಮುರಾರಿ ಮಾತನಾಡಿ , ಮಸ್ಕಿ ವಿಶ್ವ ಪರಂಪರೆ ತಾಣವಾಗಿದೆ. ಮಸ್ಕಿ ಪಟ್ಟಣದಲ್ಲಿ ಅಶೋಕ ಶಿಲಾಶಾಸನ ಇದ್ದು, ಸ್ಮಾರಕಗಳನ್ನು ವೀಕ್ಷಿಸಲು ದೇಶದ ಮಾಲೆಗಳಿಂದ ಜನರು ಬರುತ್ತಾರೆ. ಅದರಲ್ಲಿ ಬಹು ಪಾಲು ಜನರು ಬಡವರಿರುತ್ತಾರೆ .ಅವರು ಸ್ಮಾರಕಗಳನ್ನು ವೀಕ್ಷಿಸಲು ಮುಂದಾಗುತ್ತಾರೆ ಆದರೆ ಬಹಳಷ್ಟು ಹೋಟೆಲ್ ಗಳಿದ್ದು ಅವುಗಳಲ್ಲಿ ಉಪಾಹಾರ, ಊಟ ಮಾಡಲು ಪ್ರವಾಸಿಗರಿಗೆ ಆರ್ಥಿಕ ಹೊರೆಯಾಗುತ್ತದೆ.



ಇಂದಿರಾ ಕ್ಯಾಂಟೀನ್ ಪ್ರಾರಂಭವಾಗುವುದರಿಂದ ಬಡವರ ಹಾಗೂ ಶಾಲಾ ಮಕ್ಕಳಿಗೆ ಅನುಕೂಲವಾಗುತ್ತದೆ ಎಂದರು.

ಮಸ್ಕಿ ಪಟ್ಟಣಕ್ಕೆ ಇಂದ್ರ ಕ್ಯಾಂಟೀನಿಗಾಗಿ ನಮ್ಮ ಸಂಘಟನೆಯಿಂದ ಸತತ ಹೋರಾಟ ಹಾಗೂ ಶಾಸಕರ ಆಸಕ್ತಿಯಿಂದ ಮಸ್ಕಿ ಪಟ್ಟಣದಲ್ಲಿ ಮುಂದಿನ ದಿನಗಳಲ್ಲಿ ಕ್ಯಾಂಟೀನ್ ಉದ್ಘಾಟನೆ ಆಗಲಿದ್ದು,ಇಂದಿರಾ ಕ್ಯಾಂಟೀನ್ ನಲ್ಲಿ 5 ರೂ. ಕ್ಕೆ ಉಪಾಹಾರ, ರೂ .10 ಊಟಕ್ಕೆ ದೊರೆಯುತ್ತದೆ. ಬೇರೆ ಊರುಗಳಿಂದ ಬರುವ ಜನರು, ವಿದ್ಯಾರ್ಥಿಗಳು ಈ ಕ್ಯಾಂಟೀನ್‌ನಲ್ಲಿ ಆಹಾರ ಸೇವಿಸುತ್ತಾರೆ. ಕಡಿಮೆ ದರದಲ್ಲಿ ಆಹಾರ ಸಿಗುವುದು ಅನುಕೂಲವಾಗಿದೆ, ಇದರ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳೋಣ ಎಂದು ಮಸ್ಕಿ ತಾಲೂಕು ದಲಿತ ವಿದ್ಯಾರ್ಥಿ ಪರಿಸತ್ತಿನ ತಾಲೂಕ ಅಧ್ಯಕ್ಷ ಮೌನೇಶ ತುಗಲದಿನ್ನಿ ತಿಳಿಸಿದರು.


## ORM NO. CAA

**BEFORE THE HON'BLE NATIONAL COMPANY LAW TRIBUNAL, BENGALURU BENCH**

IN THE MATTER OF SECTION 230 TO 232 OF THE COMPANIES ACT, 2013

**AND**

IN THE MATTER OF SHILPA THERAPEUTICS PRIVATE LIMITED AND SHILPA MEDICARE LIMITED AND THEIR RESPECTIVE SHAREHOLDERS AND CREDITORS

CA (CAA) No. 1 /BB/2024

**IN THE MATTER OF**

SHILPA THERAPEUTICSPRIVATE LIMITED
Shilpa House, #12-6-214/A1, Hyderabad Road, Yeramarus Camp,
Raichur, Karnataka – 584 135.

**.... APPLICANT NO. 1/ TRANSFEROR COMPANY**

**AND**

**SHILPA MEDICARE LIMITED**
#12-6-214/A1, Hyderabad Road, Raichur,
Karnataka – 584 135.

**..... APPLICANT NO. 2/ TRANSFEREE COMPANY**

**NOTICE AND ADVERTISEMENT OF THE MEETING OF THE UNSECURED AND TRADE CREDITORS OF SHILPA THERAPEUTICS PRIVATE LIMITED (TRANSFEROR COMPANY)**

Notice is hereby given that vide Order dated 02.05.2024, the Hon'ble National Company Law Tribunal, Bengaluru Bench ("NCLT") has directed to convene separate meetings of the Unsecured and Trade Creditors of Shilpa Therapeutics Private Limited ("Company") for the purpose of considering, and if thought fit, approving with or without modification, the Scheme of Amalgamation proposed to be made between Shilpa Therapeutics Private Limited (Transferor Company) and Shilpa Medicare Limited (Transferee Company) and its respective shareholders and creditors.

In pursuance of the said Order, and as directed therein, further notice is hereby given thatseparate meetings of the Unsecured Creditor and Trade Creditors of Shilpa Therapeutics Private Limited will be held at 11:00 AM and 11:15 AM respectively on 02.07.2024 (Tuesday) through video conferencing/other audiovisual means, at which time and place the Unsecured Creditor and Trade Creditors of the Company are requested to attend and vote.

Copies of the Scheme of Amalgamation, the explanatory statement under Section 230 and other applicable provisions of the Companies Act, 2013 and Proxy Form can be obtained for free of charge from the registered office of the Transferor Company or from the office of its Advocates, Mr. Abhijit Atur, M/s. Agraa Legal, Advocates & Consultants, No. 19, 2nd Floor, Shivshankar Plaza, Lalbagh Road, Richmond Circle, Bangalore – 560 027

The meetings will be held through video conference and the concerned creditors may participate through https://teams.microsoft.com/l/meetup-join/. For the purpose of obtaining the credentials for meeting, Unsecured and Trade Creditors of the Company may email to info@vbshilpa.com.Persons entitled to attend and vote at the meeting, may vote at the meeting of the Unsecured and Trade Creditors in person or by proxy or by authorized representative provided that all proxies in the prescribed form are deposited at the registered office of the Transferor Company located at #12-6-214/A1, Hyderabad Road, Raichur, Yeramarus Camp, Karnataka – 584135 or through e-mail to chandra@kcsassociates.co.in not later than 48 hours before the meetings. The NCLT has appointed Mr. S.R. Tejas, Advocate as the Chairperson and Mr.ChandrashekarKankukoori, Practicing Company Secretary, as the Scrutinizer of the meeting. The above-mentioned Scheme of Amalgamation, if approved by the meeting, will be subject to the subsequent approval of the NCLT.

Dated at Raichur this the 26 day of May, 2024.

**Sd/-**
**Ramakant Innani Director**
**Shilpa Therapeutics Private Limited**
**Transferor Company**
**Shilpa House, #12-6-214/A1, Hyderabad Road, Yeramarus Camp, Raichur, Karnataka – 584 135**
**CIN: U24239KA2004PTC176079**


# ಹಾಲಾಪೂರ : ಓಪನ್ ಕ್ರಿಕೆಟ್ ಟೂರ್ನಮೆಂಟ್ ಪಂದ್ಯಾವಳಿ ಉದ್ಘಾಟನೆ



• **ಸುದ್ದಿಮೂಲ ವಾರ್ತೆ** ಕವಿತಾಳ, ಮೇ.26:

ಪಟ್ಟಣ ಸಮೀಪದ ಹಾಲಾಪೂರ ಗ್ರಾಮದಲ್ಲಿ ವಿಎಸ್‌ಎಸ್ ಕ್ರಿಕೆಟ್ ಕ್ಲಬ್ ವತಿಯಿಂದ ದಿವಂಗತ ಬಸವರಾಜಪ್ಪಗೌಡ ಚೇರಮೆನ್ ದಿ// ಶಿವಶಂಕರಗೌಡ ಯದ್ದಲದಿನ್ನಿ, ದಿ// ಅಮರೇಶಪ್ಪಗೌಡ ಹಾಲಾಪೂರ ಇವರ ಸ್ಮರಣಾರ್ಥವಾಗಿ ಓಪನ್ ಹಾರ್ಡ್ ಟೆನಿಸ್ ಬಾಲ್ ಕ್ರಿಕೆಟ್ ಟೂರ್ನಮೆಂಟ್‌ನ್ನು ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ವೆಂಕಟರಡ್ಡಿ ಗೌಡ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು ಕ್ರೀಡೆಯನ್ನು ಸಹೋದರ ಮನೋಭಾವದಿಂದ ಕಾಣಬೇಕು, ಸೋಲು ಗೆಲುವು ಸಮಾನತೆಯಿಂದ ಸ್ವೀಕರಿಸಿ ಕ್ರೀಡೆಯನ್ನು ಯಶಸ್ವಿಗೊಳಿಸಬೇಕು. ಹಾಲಾಪೂರದ ಸರಕಾರಿ ಪ್ರೌಢಶಾಲೆಗೆ ನಮ್ಮ ಗ್ರಾಮದ ದಿವಂಗತ ಬಸವರಾಜಪ್ಪಗೌಡರು ವಿಶಾಲವಾದ ಆರು ಎಕರೆ ಭೂಮಿಯನ್ನು ದಾನವಾಗಿ ಕೊಟ್ಟು ಸಾವಿರಾರು ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿದ್ದಾರೆ ಅವರನ್ನು ನಾವು ಯಾವಾಗಲೂ ಸ್ಮರಿಸುವ ಕೆಲಸ ಮಾಡಬೇಕು ಎಂದು ವೆಂಕಟರಡ್ಡಿಗೌಡ ಹೇಳಿದರು.

ನಂತರ ಬಿ ಕರಿಯಪ್ಪ ಮಾತನಾಡಿದ ,ಕ್ರೀಡೆಯು ಮನುಷ್ಯನ ಆರೋಗ್ಯಕ್ಕೆ ಉತ್ತಮ ಶಕ್ತಿಯಾಗಿದ್ದು ಅದಕ್ಕಾಗಿ ನಾವೆಲ್ಲರೂ ಕ್ರೀಡೆಯನ್ನು ಸೌಹಾರ್ದವಾಗಿ ಕಾಣಬೇಕು ಎಂದು ಹೇಳಿದರು.

ನಂತರ ಮಾತನಾಡಿದ ವ್ಯವಸ್ಥಾಪಕರಾದ ಮಹಾಂತೇಶ ಪೂಜಾರಿ ಕ್ರಿಕೆಟ್ ಪಂದ್ಯವಾಳಿಯಲ್ಲಿ ಒಟ್ಟು 32 ತಂಡಗಳು ನೊಂದಾವಣಿ ಮಾಡಿಸಿವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ತಾ.ಪಂ. ಸದಸ್ಯರಾದ ಕರಿಯಪ್ಪ, ಶಿವಶರಣಗೌಡ, ಬಸವರಾಜ ಯಮ್ಮಿಗನೂರು, ಬಸವರಾಜ ಯದ್ದಲದಿನ್ನಿ, ಬಸವರಾಜ ಜಿನ್ನಾಪೂರ, ಕರಿಯಪ್ಪ ಸಜ್ಜಲಶ್ರೀ, ಚಂದಪ್ಪ, ಮೌನೇಶ,ಸುರೇಶ, ಶರಣಬಸವ, ವಿರುಪಾಕ್ಷಿ, ಮಹಾಂತೇಶ, ಬಸವರಾಜ,ಆದೇಶ, ವಿರುಪಾಕ್ಷಿಸ್ವಾಮಿ, ಅನ್ವರ್, ದುರಗೇಶ ಇನ್ನಿತರರು ಇದ್ದರು.

# ಪದವಿಧರ ಕ್ಷೇತ್ರ : ಬಿಜೆಪಿ ಅಭ್ಯರ್ಥಿಗೆ ಬೆಂಬಲಿಸಿ - ಮೇಟಿ

• **ಸುದ್ದಿಮೂಲ ವಾರ್ತೆ** ಲಿಂಗಸುಗೂರು, ಮೇ.26:



ಈಶಾನ್ಯ ಪದವೀಧರ ಮತಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅಮರನಾಥ ಪಾಟೀಲರನ್ನು ಬೆಂಬಲಿಸುವಂತೆ ಅಖಿಲ ಭಾರತ ವೀರಶೈವ ಮಹಾಸಭಾದ ತಾಲೂಕು ಅಧ್ಯಕ್ಷ, ಬಿಜೆಪಿ ಮುಖಂಡ ಶರಣಪ್ಪ ಮೇಟಿ ಮನವಿ ಮಾಡಿದ್ದಾರೆ.

ಬಸವರಾಜ ಹೊರಟ್ಟಿ ಶಿಕ್ಷಣ ಸಚಿವರಿದ್ದ ವೇಳೆ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳನ್ನು 86 ರಿಂದ 1992-93 ರವರೆಗೆ ಅನುದಾನಕ್ಕೆ ಒಳಪಡಿಸಿದರು. ಬಿ.ಎಸ್ .ಯಡಿಯೂರಪ್ಪ ಸಿಎಂ ಆಗಿದ್ದ ವೇಳೆ 1993-94 ರಿಂದ 95 ರವರೆಗೆ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳನ್ನು ಅನುದಾನಕ್ಕೆ ಒಳಪಡಿಸಿದರು. ಅಂದಿನಿಂದ ಇದುವರೆಗೆ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳನ್ನು ಅನುದಾನಕ್ಕೆ ಒಳಪಡಿಸಿಲ್ಲ. ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವ ನೌಕರರ ಸಮಸ್ಯೆಗಳನ್ನು ಇಲ್ಲಿಯವರೆಗೆ ಸರಿಪಡಿಸಲು ಗಮನ ಹರಿಸಿಲ್ಲ. ರಾಜ್ಯದಲ್ಲಿ 6 ಸ್ಥಾನಗಳಿಗೆ ಜೂನ್ 3 ರಂದು ವಿಧಾನ ಪರಿಷತ್ ಚುನಾವಣೆ ನಡೆಯಲಿದ್ದು, ಬಿಜೆಪಿ ಅಭ್ಯರ್ಥಿಗಳನ್ನು ಬೆಂಬಲಿಸಿದರೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ಕೈ ಬಲಪಡಿಸಿದಂತಾಗಲಿದೆ ಎಂದು ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

# ಮುದಗಲ್ : ಹಜರತ್ ದಾವುಲ್ ಮಲ್ಲಿಕ್ ಉರುಸ್

• **ಸುದ್ದಿಮೂಲ ವಾರ್ತೆ** ಮುದಗಲ್, ಮೇ.26:

ಪಟ್ಟಣದ ಸೋಮವಾರಪೇಟೆ ಕೆರೆ ಹತ್ತಿರದ ಅಬ್ದುಲ್ ಹುಗ್ಗಿ ಹೊಲದಲ್ಲಿರುವ ಹಜರತ್ ದಾವುಲ್ ಮಲ್ಲಿಕ್ ಉರುಸ್ ಸಡಗರ ಸಂಭ್ರಮದಿಂದ ಶನಿವಾರ ಜರುಗಿತು.

ಅಬ್ದುಲ್ ಸಾಬ್ ಹುಗ್ಗಿ ನಿವಾಸದಿಂದ ಗಂಧದ ಮೆರವಣಿಗೆ ದರ್ಗಾದವರೆಗೆ ನಡೆಯಿತು.

ಉರುಸ್ ನಿಮಿತ್ತ ವಿವಿಧ ಧಾರ್ಮಿಕ ಕಾರ್ಯಕ್ರಮ ಜರುಗಿದವು. ಬಾದಾಮಿ ತಾಲೂಕಿನ ನೀಲಗುಂದದ ಮಂಜುನಾಥ ಅಪ್ಪಾಜಿ, ದೇವಪೂರ ರವಿ ಮುತ್ಯಾ , ನಬಿಸಾಬ್ ನದಾಫ್ ಹಾಗೂ ಹಲವು ಕುದುರಿಕಾರರನ್ನ ದರ್ಗಾ ಮುಖ್ಯಸ್ಥರು ಸನ್ಮಾನಿಸಿದರು.

ಮಸ್ಕಿ ಶಾಸಕ ಆರ್. ಬಸನಗೌಡ ಪಾಟೀಲ್ ತುರ್ವಿಹಾಳ ದರ್ಗಾಕ್ಕೆ ಭೇಟಿ ನೀಡಿ ಹಜರತ್ ದಾವುಲ್ ಮಲ್ಲಿಕ್ ದೇವರ ದರ್ಶನ ಪಡೆದರು. ಅಹಮದ್ ಲಾಲಾ ಗುರುಜೀ, ಅಬ್ದುಲ್ ಸಾಬ್ ಹುಗ್ಗಿ ಶಾಸಕರಿಗೆ ಸನ್ಮಾನಿಸಿದರು. ದರ್ಗಾದಲ್ಲಿ ಮಹಾಪ್ರಸಾದ ಹಾಗೂ ರವಿವಾರ ಜಿಯಾರಾತ್ ಫಾತೆಹಾ ನಡೆಯಿತು.

ಅಕ್ಬರ್ ಷಾ, ಮಹಿಬೂಬ ಚಟ್ನಿ, ಷಾ ನವಾಜ್, ಖಾಜಾಸಾಬ್ ಮಂಡಿ, ಅಲ್ಲಾವಲಿ ಹಾಗೂ ಭಕ್ತರು ಇದ್ದರು.

